ಮಕ್ಕಳಿಗಾಗಿ ಪವಾಡ

ಎಸ್. ರೇವಣ್ಣ



ಭಾರತ ಜ್ಞಾನ ವಿಜ್ಞಾನ ಸಮಿತಿ

Makkaligaagi pavaadagalu a book written by Mr.S.Revanna on behalf of Bharat Gyan Vigyan Samithi, Karnataka.

First edition: September 2001

Copies: 5000

Pages: 24+4

Rate: 6.00

Published by:
E.Basavaraju,
Secretary
Bharat Gyan Vigyan Samithi, Karnataka

ಮುನ್ನುಡಿ

ಗೆಳೆಯರೆ,

ಭಾರತ ಜ್ಞಾನ ವಿಜ್ಞಾನ ಸಮಿತಿ ಈ ವರ್ಷ ಜ್ಞಾನ ವಿಜ್ಞಾನ ಓದುಗರ ಬಳಗ ಎಂಬ ಯೋಜನೆಯಡಿಯಲ್ಲಿ, ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಮಕ್ಕಳಿಗಾಗಿ ಪವಾಡಗಳು, ನಮ್ಮ ಚಂದ್ರ, ಹಾಡಿ ನಲಿಯೋಣ, ಹಿರೋಷಿಮಾದ ಮಕ್ಕಳು ಹಾಗೂ ನಮ್ಮ ಆರೋಗ್ಯ ಎಂಬ ಐದು ಪುಸ್ತಕಗಳನ್ನು ಹೊರತರುತ್ತಿದೆ. ಉತ್ತಮವಾದ ಪುಸ್ತಕಗಳನ್ನು ಕಡಿಮೆ ಬೆಲೆಯಲ್ಲಿ ದೊರಕಿಸಿಕೊಡುವ ಉದ್ದೇಶದಿಂದ ಈ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಈ ಪುಸ್ತಕಗಳು ನಿಮಗೆ ಇಷ್ಟವಾಗುತ್ತವೆಂದು ನಂಬಿದ್ದೇವೆ. ಈ ಪುಸ್ತಕಗಳ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಬರೆದು ಕಳಿಸಿ. ಅದು ಮುಂದೆ ನಿಮಗಾಗಿ ನಾವು ತರಲಿರುವ ಪುಸ್ತಕಗಳನ್ನು ಇನ್ನೂ ಉತ್ತಮಪಡಿಸಲು ಸಹಾಯವಾಗುತ್ತದೆ.

ಮಕ್ಕಳಿಗಾಗಿ ಪವಾಡಗಳು ಪುಸ್ತಕ, ಮಕ್ಕಳು ತಾವೇ ಕೆಲವು ಪವಾಡಗಳನ್ನು ಸುರಕ್ಷಿತವಾಗಿ ಮಾಡಿ ಅದರ ಹಿಂದಿನ ವೈಜ್ಞಾನಿಕ ಹಿನ್ನೆಲೆ ಅರ್ಥ ಮಾಡಿಕೊಳ್ಳಲು ಸಹಾಯಕವಾಗಲಿದೆ. ಈ ಪುಸ್ತಕವನ್ನು ರಚಿಸಿಕೊಟ್ಟ ಬಿಜಿವಿಎಸ್ ರಾಜ್ಯ ಸಹಕಾರ್ಯದರ್ಶಿ ಶ್ರೀ ಎಸ್.ರೇವಣ್ಣ ಅವರಿಗೆ, ಅಂದವಾದ ಮುಖಪುಟ ಹಾಗೂ ಒಳ ಚಿತ್ರ ರಚಿಸಿಕೊಟ್ಟ ಶ್ರೀ ಗುಜ್ಜಾರಪ್ಪನವರಿಗೆ, ಡಿ.ಟಿ.ಪಿ ಮಾಡಿದ ಬಿಜಿವಿಎಸ್ ರಾಜ್ಯ ಕಛೇರಿಯ ಕುಮಾರಿ ಸಿ.ಹೇಮಾವತಿಯವರಿಗೆ, ಒಳಪುಟ ವಿನ್ಯಾಸ ಮಾಡಿದ ಗೆಳೆಯ ಶ್ರೀ ರಾಜಶೇಖರ್‌ರವರಿಗೆ, ಪುಸ್ತಕವನ್ನು ಹೊರತರಲು ಶ್ರಮಿಸಿದ ಶ್ರೀಎಫ್.ಸಿ.ಚೇಗರೆಡ್ಡಿ ಅವರಿಗೆ ಹಾಗೂ ಕಡಿಮೆ ಸಮಯದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಅಕ್ಷರವಿನ್ಯಾಸದ ಗೆಳೆಯ ಚಂದ್ರು ಇವರುಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಯೋಜನೆ ಪ್ರಾರಂಭಿಸಿದಾಗ ಪ್ರಕಟಣಾಪೂರ್ವ ಕೂಪನ್ ಗಳನ್ನು ಮಾರಾಟ ಮಾಡಿ ಪುಸ್ತಕ ಪ್ರಕಟಣೆಯ ಸಾಹಸಕ್ಕಿಳಿಯಲು ನೆರವಾದ ನೂರಾರು ಗೆಳೆಯರಿಗೆ ನಮ್ಮ ವಿಶೇಷ ನಮನಗಳು. ಈ ಪುಸ್ತಕ ಕರ್ನಾಟಕದ ಮನೆ ಮನೆಗೆ ತಲುಪಿ ಮಕ್ಕಳಲ್ಲಿ ಹಾಗೂ ನವ ಸಾಕ್ಷರರಲ್ಲಿ ಓದುವ ಹವ್ಯಾಸ ಬೆಳೆಸಲು ಹಾಗೂ ಮೂಢ ನಂಬಿಕೆ ಅಳಿಸಲು ಪ್ರೇರಣೆ ನೀಡಲಿ ಎಂದು ಹಾರೈಸುತ್ತೇವೆ.

ಕಾರ್ಯದರ್ಶಿ
ಭಾರತ ಜ್ಞಾನ ವಿಜ್ಞಾನ ಸಮಿತಿ


ಪರಿವಿಡಿ

ಮಕ್ಕಳಿಗಾಗಿ ಪವಾಡ

– ಎಸ್.ರೇವಣ್ಣ

1. ಖಾಲಿ ಸ್ಲೇಟಿನಲ್ಲಿ ಮಂತ್ರದಿಂದ ಬರವಣಿಗೆ

ಪ್ರೇಕ್ಷಕರಿಗೆ ಎರಡು ಖಾಲಿ ಸ್ಲೇಟು ತೋರಿಸಿ. ಸ್ಲೇಟಿನ ಎರಡು ಬದಿಗಳನ್ನು ತೋರಿಸಿ ಏನಾದರೂ ಬರೆದಿದೆಯಾ ಎಂದು ಕೇಳಿ. ಏನೂ ಇಲ್ಲ ಎನ್ನುವರು. ಅವೆರಡನ್ನು ಕೂಡಿಸಿ ಒಂದೇ ಕೈಯಲ್ಲಿ ಹಿಡಿದು, ಮಂತ್ರ ಹೇಳಿ. ಅದರಲ್ಲಿ ಬರವಣಿಗೆ ಇರುವಂತೆ ಮಾಡಿ ಜನಕ್ಕೆ ತೋರಿಸಿ.



ಮಾಡುವ ವಿಧಾನ: ಇದಕ್ಕೆ ಸಣ್ಣ ಪೂರ್ವ ತಯಾರಿ ಅವಶ್ಯ. ಕಟ್ಟಿಗೆಯ ಚೌಕಟ್ಟು (ಅಂಚು) ಇರುವ, ಒಂದೇ ಅಳತೆಯ, ತಗಡಿನ 3 ಸ್ಲೇಟುಗಳನ್ನು ತೆಗೆದುಕೊಳ್ಳಿ. ಒಂದು ಸ್ಲೇಟಿನ ಕಟ್ಟಿಗೆಯ ಚೌಕಟ್ಟನ್ನು ತೆಗೆದು ಬಿಡಿ. ಉಳಿದೆರಡು ಸ್ಲೇಟಿನ ಒಳಭಾಗದಲ್ಲಿ ಸರಿಯಾಗಿ ಕೂರುವ ಅಳತೆಯಲ್ಲಿ ಅದನ್ನು ಕತ್ತರಿಸಿಕೊಳ್ಳಿ. ಕತ್ತರಿಸಿದ ತುಂಡು ಎರಡೂ ಸ್ಲೇಟಿನಲ್ಲಿ ಸರಿಯಾಗಿ ಕೂಡುವಂತಿರಲಿ.

ಪ್ರದರ್ಶನ ಆರಂಭಿಸುವ ಮೊದಲೇ ಒಂದು ಸ್ಲೇಟಿನಲ್ಲಿ ಬಿ.ಜಿ.ವಿ.ಎಸ್ ಎಂದೂ, ಕತ್ತರಿಸಿದ ತುಂಡಿನಲ್ಲಿ "ಪವಾಡಗಳಿಗೆ ಸ್ವಾಗತ" ಎಂದೂ ಬರೆದುಕೊಳ್ಳಿ. ಕತ್ತರಿಸಿದ ತುಂಡನ್ನು ಬಿ.ಜಿ.ವಿ.ಎಸ್ ಎಂದು ಬರೆದ ಸ್ಲೇಟಿನ ಮೇಲೆ ಬೋರಲಾಗಿ ಹಾಕಿ ಕೂಡಿಸಿ. ಈಗ ಬಿ.ಜಿ.ವಿ.ಎಸ್ ಎಂಬ ಬರಹ ಮುಚ್ಚುತ್ತದೆ ಹಾಗೂ ತುಂಡಿನ ಹಿಂಬಾಗ ಖಾಲಿ ಇರುವುದರಿಂದ ಸ್ಲೇಟು ಖಾಲಿಯಾಗಿ ಕಾಣುವುದು.

ಮಂತ್ರದಿಂದ ಬರಹ ಮಾಡುವೆ ಎಂದು ಜನರಿಗೆ ಹೇಳುವಾಗ ಒಂದು ಸ್ಲೇಟನ್ನು ಇನ್ನೊಂದು ಸ್ಲೇಟಿನ ಮೇಲೆ ಹಾಕಿ ಮುಚ್ಚಿಬಿಡಿ. ಆಗ ನೀವು ಕತ್ತರಿಸಿ ಜೋಡಿಸಿದ ಸ್ಲೇಟಿನ ತುಂಡು ಇನ್ನೊಂದು ಸ್ಲೇಟಿಗೆ ವರ್ಗಾವಣೆಯಾಗುವುದು. ಈಗ ಎರಡನ್ನು ಬೇರ್ಪಡಿಸಿ ಪ್ರೇಕ್ಷಕರಿಗೆ ತೋರಿಸಿ. ಕತ್ತರಿಸಿದ ತುಂಡು ಸ್ಲೇಟಿನಿಂದ ಬೇರೆಯಾಗದಂತೆ ಹೆಬ್ಬೆರಳಿಂದ ಒತ್ತಿ ಹಿಡಿಯುವುದನ್ನು ಮರೆಯಬೇಡಿ. ಸ್ವಲ್ಪ ಅಭ್ಯಾಸ ಮಾಡಿದ ನಂತರ ಪ್ರದರ್ಶನ ನೀಡಿ.

ವೈಜ್ಞಾನಿಕ ಹಿನ್ನೆಲೆ : ಇದೊಂದು ಕೈಚಳಕ.

2. ಕರ್ಪೂರದ ಆರತಿ

ದೇವಸ್ಥಾನಗಳಲ್ಲಿ ಹಾಗೂ ಇತರೆ ಕಾರ್ಯಗಳಲ್ಲಿ ತಟ್ಟೆಯಲ್ಲಿ ಕರ್ಪೂರ ಹಚ್ಚಿ ಮಂಗಳಾರತಿ ಮಾಡುವುದು ಸಾಮಾನ್ಯ ಸಂಗತಿ. ಆದರೆ ಕೆಲವು ವ್ಯಕ್ತಿಗಳು ಅಂಗೈಯಲ್ಲಿ ಕರ್ಪೂರ ಹಚ್ಚಿಕೊಂಡು ಮಂಗಳಾರತಿ ಮಾಡಿ ನಮಗೆ ದೈವ ಶಕ್ತಿ ಇದೆ ಎಂದು

ದೇವಮಾನವರಂತೆ ವರ್ತಿಸುತ್ತಾರೆ. ಈ ಪವಾಡಕ್ಕೆ ತುಂಬಾ ಹೆಸರು ವಾಸಿಯಾದವರು ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು. ಇವರು ಪ್ರಾರಂಭದಲ್ಲಿ ಮಂಡ್ಯದ ಕೇಂದ್ರ ಅಂಚೆ ಕಛೇರಿಯಲ್ಲಿ ಗುಮಾಸ್ತರಾಗಿದ್ದರು.

ಮಾಡುವ ವಿಧಾನ : ಸ್ವಲ್ಪ ದಪ್ಪ ಕರ್ಪೂರವನ್ನು (ಉಂಡೆ ಕರ್ಪೂರ) ತೆಗೆದುಕೊಳ್ಳಿ. ಅದನ್ನು ಅಂಗೈಯಲ್ಲಿ ಇಟ್ಟುಕೊಂಡು ಬೆಂಕಿ ಹಚ್ಚಿರಿ. ಸ್ವಲ್ಪ ಸಮಯದ ನಂತರ ಕೈ ಸುಡಲು ಪ್ರಾರಂಭಿಸುತ್ತದೆ. ತಕ್ಷಣ ಕರ್ಪೂರವನ್ನು ಮತ್ತೊಂದು ಕೈಗೆ ವರ್ಗಾಯಿಸಿಕೊಳ್ಳಿ. ಹೀಗೆ ಕೈ ಬದಲಾಯಿಸುತ್ತಲೇ ಇದ್ದರೆ ಕೈ ಸುಡುವುದಿಲ್ಲ. ಕೊನೆಗೆ ಅದನ್ನು ಬಾಯಿಗೆ ಹಾಕಿಕೊಂಡು ಬಾಯಿ ಮುಚ್ಚಿಕೊಳ್ಳಿ.

ವೈಜ್ಞಾನಿಕ ಹಿನ್ನೆಲೆ : ಕರ್ಪೂರವು ಒಂದು ವಿಶೇಷವಾದ ವಸ್ತು. ಇದಕ್ಕೆ ಬೆಂಕಿ ತಾಕಿಸಿದಾಗ ಉರಿದು ಘನ ರೂಪದಿಂದ ನೇರವಾಗಿ ಆವಿಯಾಯಾಗುತ್ತದೆ. ಇದಕ್ಕೆ ಉತ್ಪತನ ಎನ್ನುತ್ತೇವೆ. ಇದರಿಂದಾಗಿ ಉರಿಯುವ ಕರ್ಪೂರ ಕೈಯಲ್ಲಿ ಕೆಲವೇ ಸೆಕೆಂಡುಗಳ ಕಾಲವಿದ್ದರೆ ಕೈ ಸುಡುವುದಿಲ್ಲ. ಮತ್ತೊಂದು ಕಾರಣವೆಂದರೆ ಕೈಯ ಮೇಲೆ ಒಂದು ತೆಳುವಾದ ನೀರಿನ ಪಸೆ ಇರುತ್ತದೆ. ಇದು ಆವಿಯಾಗುವ ತನಕ ಕೈ ಸುಡುವುದಿಲ್ಲ. ಉರಿಯುತ್ತಿರುವ ಕರ್ಪೂರವನ್ನು ಬಾಯಿಗೆ ಹಾಕಿಕೊಂಡಾಗ ಬಾಯಲ್ಲಿ ಇರುವ ಜೊಲ್ಲು ಈ ಶಾಖದಿಂದ ರಕ್ಷಿಸುತ್ತದೆ. ಬಾಯಿ ಮುಚ್ಚಿದಾಗ ಆಮ್ಲಜನಕದ ಕೊರತೆಯಿಂದ ಆರಿಹೋಗುತ್ತದೆ.

3. ಸ್ವರ್ಗಲೋಕದ ಗಂಟೆ:

ಮದ್ರಾಸಿನ ಖ್ಯಾತ ಸ್ವಾಮಿಯೋರ್ವನ ಬಳಿ ಒಂದು ವಿಶೇಷವಾದ ಗಂಟೆ ಇತ್ತು. ಅದು ನೇರ ವಾಗಿ ಸ್ವರ್ಗ ಲೋಕದಿಂದಿಳಿದು ಬಂದ ವಿಶೇಷ ಗಂಟೆ. ಇದನ್ನು ಆತ ಅಲ್ಲಾಡಿಸಿದಾಗ ಮಾತ್ರ ಶಬ್ಧ ಹೊರಡುತ್ತಿತ್ತು! ಭಕ್ತರು ಅಲ್ಲಾ ಡಿಸಿದಾಗ ಶಬ್ಧ ಬರುತ್ತಿ ರಲಿಲ್ಲ! ಯಾಕೆಂದರೆ, ಅದಕ್ಕೆ ನಾಲಿಗೆಯಿರಲಿಲ್ಲ.



ಮಾಡುವ ವಿಧಾನ : ನಾಲಿಗೆ ಇರುವ ಹಾಗೂ ನಾಲಿಗೆ ಇಲ್ಲದಿರುವ ಎರಡು ಸಣ್ಣ ಗಂಟೆಗಳನ್ನು ತೆಗೆದುಕೊಳ್ಳಿ. ನಾಲಿಗೆ ಇರುವ ಗಂಟೆಯನ್ನು ನೀವು ತೊಟ್ಟ ಬಟ್ಟೆಯ ಒಳಗೆ ತೋಳಿನಲ್ಲಿ ಅಥವಾ ಕಂಕುಳಲ್ಲಿ ಕಟ್ಟಿಕೊಳ್ಳಿ. ಸಭಿಕರಲ್ಲಿ ಯಾರನ್ನಾದರೂ ಕರೆಯಿರಿ. ಅವರ ಕೈಯಲ್ಲಿ ನಾಲಿಗೆ ಇಲ್ಲದ ಗಂಟೆಯನ್ನು ನೀಡಿ ಅಲ್ಲಾಡಿಸಲು ಹೇಳಿದಾಗ ಅದು ಶಬ್ಧ ಮಾಡುವುದಿಲ್ಲ. ನಂತರ ನಾನು ಮಂತ್ರದಿಂದ ಶಬ್ಧ ಮಾಡುತ್ತೇನೆಂದು ಹೇಳಿ. ನೀವು ಮೊದಲೇ ನಾಲಿಗೆ ಇರುವ ಗಂಟೆ ಕಟ್ಟಿಕೊಂಡಿರುವ ಕೈಯಲ್ಲಿ ನಾಲಿಗೆ ಇಲ್ಲದ ಗಂಟೆಯನ್ನು ಅಲ್ಲಾಡಿಸಿ. ಆಗ ಶಬ್ಧ ಬರುತ್ತದೆ. ಇದು ಪ್ರೇಕ್ಷಕರಿಗೆ ಪವಾಡ ನಡೆಯುತ್ತಿದೆ ಎಂಬ ಭ್ರಮೆ ಉಂಟು ಮಾಡುತ್ತದೆ.

ವೈಜ್ಞಾನಿಕ ವಿವರ : ಇದೊಂದು ಕೈಚಳಕ

4. ತೆಂಗಿನ ಕಾಯಿಯಿಂದ ಕರ್ಚೀಫ್

ಕೆಲವು ಮಂದಿ ಭಕ್ತರು ದೇವಸ್ಥಾನಕ್ಕೆ ಹೋಗಿ ಪೂಜಾರಿಯ ಕೈಗೆ ತೆಂಗಿನ ಕಾಯಿಯನ್ನು ನೀಡುತ್ತಾರೆ. ಸ್ವಲ್ಪ ಸಮಯದ ನಂತರ ಅವರು ಕೊಟ್ಟ ತೆಂಗಿನ ಕಾಯನ್ನು ಒಡೆದಾಗ ಅದರ ಒಳಗೆ ಕುಂಕುಮ, ಅರಿಶಿಣ, ಹೂವುಗಳು ಗೋಚರಿಸುತ್ತವೆ. ಇದನ್ನು ಕಂಡ ಭಕ್ತರು ಗಾಬರಿಯಾಗುತ್ತಾರೆ. ಈ ರೀತಿಯ ಪವಾಡಗಳು ಕೆಲವು ದೇವಸ್ಥಾನಗಳಲ್ಲಿ ನಡೆಯುತ್ತವೆ. ನಂತರ ದೋಷ ಪರಿಹಾರಕ್ಕಾಗಿ ಪೂಜೆ, ಪುನಸ್ಕಾರಗಳಿಗೆ ಹಣ ಸುಲಿಗೆ ಮಾಡಲಾಗುತ್ತದೆ.

ಮಾಡುವ ವಿಧಾನ : ಒಂದು ತೆಂಗಿನ ಕಾಯನ್ನು ಸಭಿಕರಿಗೆ ತೋರಿಸಿ ಅದರಲ್ಲಿ ರಂಧ್ರ ಇದೆಯೇ ಎಂಬುದನ್ನು ಪರೀಕ್ಷಿಸಲು ಹೇಳಿ. ನಂತರ ಅವರಿಂದಲೇ ಒಂದು ಕರ್ಚೀಫ್ ಕೇಳಿ ಪಡೆಯಿರಿ. ಆ ಕರ್ಚೀಫ್‌ನ್ನು ಅವರ ಎದುರೇ ಸುಟ್ಟು ಹಾಕಿ. ಕರ್ಚೀಫ್‌ನ ಸುಟ್ಟ ಬೂದಿಯನ್ನು ಕಾಯಿಗೆ ಸವರಿ, ಕಾಯಿಯನ್ನು ಒಡೆಯಿರಿ. ಅದರ ಒಳಗೆ ನೀವು ಸುಟ್ಟು ಹಾಕಿದ್ದ ಕರ್ಚೀಫ್ ಇರುತ್ತದೆ. ಇದರಿಂದ ಎಲ್ಲರಿಗೂ ಆಶ್ಚರ್ಯ!



ಪೂರ್ವಸಿದ್ಧತೆ : ಅಂಗಡಿಯಲ್ಲಿ ಒಂದೇ ಬಣ್ಣದ, ಒಂದೇ ಅಳತೆಯ ಎರಡು ಕರ್ಚಿಫ್‌ಗಳನ್ನು ತೆಗೆದುಕೊಳ್ಳಿ. ತೆಂಗಿನ ಕಾಯಿಯ ಜುಟ್ಟನ್ನು ಮಧ್ಯೆ ಭಾಗದಲ್ಲಿ ಸರಿಸಿ ಕಾಯಿಯ ಕಣ್ಣನ್ನು ರಂಧ್ರ ಮಾಡಿ. ಎಳೆನೀರನ್ನು ಹೊರಗೆ ತೆಗೆದು ನಿಮ್ಮ ಹತ್ತಿರ ಇರುವ ಒಂದು ಕರ್ಚಿಫ್‌ನ್ನು ಒಳಗೆ ತೂರಿಸಿ. ಮತ್ತೆ ಜುಟ್ಟಿನಿಂದ ಕಣ್ಣನ್ನು ಮುಚ್ಚಿ. ನೀವು ಕಾರ್ಯಕ್ರಮ ನೀಡುವ ಮುನ್ನ ನಿಮ್ಮ ಹತ್ತಿರ ಇರುವ ಮತ್ತೊಂದು ಕರ್ಚಿಫ್‌ನ್ನು ಸಭಿಕರಲ್ಲಿ ಯಾರಿಗಾದರೂ ಕೊಟ್ಟು ನೀವು ಕೇಳಿದಾಗ ತಂದು ಕೊಡಲು ಹೇಳಿರಬೇಕು. ಪ್ರೇಕ್ಷಕರ ಎದುರು ಅದನ್ನು ಸುಡಿ. ಇದೇ ರೀತಿ ತೆಂಗಿನ ಕಾಯಿಯ ಒಳಗೆ ಕುಂಕುಮ, ಅರಿಶಿಣ ಇತ್ಯಾದಿಗಳನ್ನು ಸುಲಭವಾಗಿ ಸೇರಿಸಬಹುದು.

5. ಶೂನ್ಯದಿಂದ ವಿಭೂತಿ ಸೃಷ್ಟಿ

ನಾನು ಶೂನ್ಯದಿಂದ ವಿಭೂತಿಯನ್ನು ಸೃಷ್ಟಿಸುತ್ತೇನೆಂದು ಹೇಳಿ. ಖಾಲಿ ಕೈಗಳನ್ನು ತೋರಿಸಿ. ನಂತರ ಎರಡೂ ಕೈಗಳನ್ನು ಗಾಳಿ ಯಲ್ಲಿ ಆಡಿಸಿ ಪ್ರೇಕ್ಷಕರಿಗೆಲ್ಲಾ ವಿಭೂತಿಯನ್ನು ನೀಡಿರಿ.



ಮಾಡುವ ವಿಧಾನ : ಸಣ್ಣ ಮತ್ತು ಮೃದುವಾದ ವಿಭೂತಿ ಉಂಡೆಯನ್ನು ಹೆಬ್ಬೆರಳು ಮತ್ತು ತೋರು ಬೆರಳಿನ ಮಧ್ಯ ಅಡಗಿಸಿಕೊಂಡು ನಿರಂತರವಾಗಿ ಮಾತನಾಡುತ್ತಿರಬೇಕು. ಕೈಯನ್ನು ದೊಡ್ಡ ವೃತ್ತಾಕಾರದಲ್ಲಿ ತಿರುಗಿಸುತ್ತಾ ಬೆರಳುಗಳ ಮಧ್ಯೆ ಇರುವ ವಿಭೂತಿಯನ್ನು ಅಂಗೈಗೆ ತಂದು ಸಭಿಕರಿಗೆ ಹಂಚುವುದು. ವಿಭೂತಿಯನ್ನು ಪುಡಿ ಮಾಡಿದಾಗ ಬೂದಿಯ ಕಣಗಳ ಮಧ್ಯೆ ಗಾಳಿ ಸೇರಿ, ವಸ್ತುವಿನ ಪ್ರಮಾಣವು ಹೆಚ್ಚಾದಂತೆ ತೋರುವುದು. ಪ್ರೇಕ್ಷಕರೆಲ್ಲರೂ ಕುತೂಹಲದಿಂದ ಗಾಳಿಯಲ್ಲಿ ಕೈಯನ್ನು ಅಲ್ಲಾಡಿಸುತ್ತಿರುವುದನ್ನು ಗಮನಿಸುತ್ತಿರುವಾಗ ಜೇಬಿಗೆ ಇಳಿದ ಎಡಗೈ. ಅಲ್ಲಿಂದ ವಿಭೂತಿಯ ದೊಡ್ಡದಾದ ಉಂಡೆಯನ್ನು ತೆಗೆದಾಗ ಅದು ಯಾರ ಗಮನಕ್ಕೂ ಬರುವುದಿಲ್ಲ. ಸ್ವಲ್ಪ ಸಮಯ ಎರಡೂ ಕೈಯಿಂದ ವಿಭೂತಿ ಹಂಚಿ, ಇರುವ ಉಂಡೆ ಮುಗಿದಾಗ ಮತ್ತೆ ಜೇಬಿಗೆ ಕೈ ಹಾಕಬಹುದು.

ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸುತ್ತೇವೆಂದು ಹೇಳಿಕೊಳ್ಳುವ ದೇವಮಾನವರು ಈವರೆಗೆ ಸೃಷ್ಟಿಸಿರುವುದು ಈ ಜಗತ್ತಿನಲ್ಲಿರುವುದನ್ನೇ. ತಮ್ಮ ಶರೀರದಲ್ಲಿ ಅಡಗಿಸಿಕೊಳ್ಳಲಾಗುವಂತಹ ವಸ್ತುಗಳನ್ನು ಮಾತ್ರ. ಇದನ್ನು ಪಾಮಿಂಗ್ (ಕೈಚಳಕ) ಎನ್ನುತ್ತಾರೆ.

ವೈಜ್ಞಾನಿಕ ವಿವರ : ಕೈಯ ದೊಡ್ಡ ಚಲನೆ. ಬೆರಳುಗಳ ಚಿಕ್ಕ ಚಲನೆಯನ್ನು ಮುಚ್ಚುತ್ತದೆ.

6. ತಪಶ್ಶಕ್ತಿಯಿಂದ ಯಜ್ಞ ಕುಂಡದಲ್ಲಿ ಬೆಂಕಿ

ಯಜ್ಞಕುಂಡವನ್ನು ರಚಿಸಲಾಗಿದೆ. ಕಟ್ಟಿಗೆಯ ರಾಶಿಯೂ ಇದೆ. ಗುಣು-ಗುಣು ಮಂತ್ರ ಹೇಳುತ್ತಾ, ಕಟ್ಟಿಗೆಗೆ ತುಪ್ಪ ಸುರಿಯಲಾಗುತ್ತದೆ. ಈಗ ಬೆಂಕಿ ಬೇಕಲ್ಲವೆ? ಪವಾಡ ಪುರುಷ ತನ್ನ ದೃಷ್ಟಿಯನ್ನು ಕುಂಡದ ಮೇಲೆ ಹರಿಸಿ, ಮುರುಗುಟ್ಟಿಕೊಂಡು ನೋಡುತ್ತಾನೆ. ಭಗ್ಗನೆ ಬೆಂಕಿ ಉರಿದು, ಯಜ್ಞಕುಂಡ ಬೆಳಗುತ್ತದೆ. ವೀಕ್ಷಕರು ಈತನ



ಪಾದಕ್ಕೆರಗುತ್ತಾರೆ. ಬರೀ ದೃಷ್ಟಿಯಿಂದಲೇ ಬೆಂಕಿ ಉರಿಸಬಲ್ಲ ಮಹಾಪುರುಷನೊಡನೆ ಒಳ್ಳೆಯ ಸಂಬಂಧವನ್ನಿಟ್ಟುಕೊಳ್ಳುವುದು ಉತ್ತಮವೆಂದು ಆತನಿಗೆ ದಕ್ಷಿಣೆ ಸಲ್ಲಿಸಿ, ಪಾದಕ್ಕೆರಗುತ್ತಾರೆ. ಈ ಘಟನೆಯು ನಡೆದದ್ದು ಮೂಲೆಯ ಹಳ್ಳಿಯಲ್ಲಲ್ಲ- ದಿಲ್ಲಿಯಲ್ಲಿ! ದಕ್ಷಿಣೆ ಕೊಟ್ಟು ಪಾದಕ್ಕೆರಗಿದವರಲ್ಲಿ ಮಂತ್ರಿಗಳು, ಉನ್ನತಾಧಿಕಾರಿಗಳು, ವಿಜ್ಞಾನಿಗಳಿದ್ದರು.

ಮಾಡುವ ವಿಧಾನ : ಚಿಕ್ಕ ತಟ್ಟೆಯೊಂದರಲ್ಲಿ ಪೇಪರ್ ಚೂರುಗಳನ್ನು ಹಾಕಿ. ಪೇಪರ್ ಚೂರುಗಳ ಅಡಿಯಲ್ಲಿ ಪೊಟಾಸಿಯಂ ಪರಮ್ಯಾಂಗನೇಟ್ ಅನ್ನು ಕಾಣಿಸದಂತೆ ಇಡಿ. ಅದಕ್ಕೆ ಜೇನುತುಪ್ಪ ಸುರಿದು ಬೆಂಕಿ ಹಚ್ಚುವುದಾಗಿ ಹೇಳಿ. ಬೆಂಕಿ ಹಚ್ಚುವ ಮೊದಲು ಅದರ ರುಚಿ ನೋಡಲು ಸಭಿಕರಿಗೆ ನೀಡಿ. ಇದು ಜೇನು ತುಪ್ಪವೆಂದು ಪ್ರಮಾಣೀಕರಿಸಿದ ಬಳಿಕವೇ ಅದನ್ನು ಯಜ್ಞಕುಂಡಕ್ಕೆ ಸುರಿಯಿರಿ. ಬಳಿಕ, ಮನಸ್ಸಿನ ಶಕ್ತಿಯನ್ನು ಕಣ್ಣುಗಳ ಮೂಲಕ ಹರಿಸಿದರಾಯಿತು! ಯಜ್ಞಕುಂಡದಲ್ಲಿ ಭಗ್ಗನೆ ಬೆಂಕಿ ಹೊತ್ತಿಕೊಳ್ಳುತ್ತದೆ.

ವೈಜ್ಞಾನಿಕ ಹಿನ್ನೆಲೆ : ಜೇನು ತುಪ್ಪವೆಂದು ಹಾಕಿದ ವಸ್ತು ನಿಜವಾಗಿಯೂ ಗ್ಲಿಸರಿನ್. ಇದನ್ನು ಕಾಗದದ ಚೂರುಗಳ ಮೇಲೆ ಸುರಿದಾಗ ಪೇಪರ್ ಕೆಳಗಿರುವ ಪೊಟಾಸಿಯಂ ಪರಮ್ಯಾಂಗನೇಟ್‌ನೊಂದಿಗೆ ರಾಸಾಯನಿಕ ಕ್ರಿಯೆ ನಡೆದು ಬೆಂಕಿ ಹತ್ತಿಕೊಳ್ಳುವುದು.

7. ಮಾಯಾನಾಣ್ಯ

ಮಾಡುವ ವಿಧಾನ : 7 ವರ್ಷಕ್ಕಿಂತ ಕಡಿಮೆ ಇರುವ ಒಂದು ಹುಡುಗ ಅಥವಾ ಹುಡುಗಿಯನ್ನು ವೇದಿಕೆಗೆ ಕರೆಯಿರಿ. ಕಣ್ಣು ಮುಚ್ಚಿಕೊಳ್ಳಲು ತಿಳಿಸಿ. ತೇವ ಮಾಡಿದ 25 ಪೈಸೆ ನಾಣ್ಯವನ್ನು ಆ ಹುಡುಗ/ಹುಡುಗಿಯ ಹಣೆಯ ಮೇಲೆ ಬಲವಾಗಿ ಒತ್ತಿ ಅಂಟಿಸಿ. ತಕ್ಷಣ ಅದನ್ನು ತೆಗೆದು ಬಿಡಿ. ಈಗ ಆತ/ಕೆ ನಾಣ್ಯ ಹಣೆಯಲ್ಲೇ ಅಂಟಿಕೊಂಡಿದೆ ಎಂದು ಭಾವಿಸುತ್ತಾನೆ/ಳೆ. ನಾಣ್ಯವನ್ನು ಮುಟ್ಟದೇ ಹಣೆಯಿಂದ ಅದನ್ನು ಉದುರಿಸಲು ಹೇಳಿ. ಆತ/ಆಕೆ ತಲೆಯನ್ನು ಅಲ್ಲಾಡಿಸುತ್ತಾ ಬೀಳಿಸಲಾಗದ್ದರಿಂದ ಹತಾಶೆಗೊಂಡು ಇಡೀ ಮೈಯನ್ನೇ ಕಂಪಿಸತೊಡಗುತ್ತಾನೆ/ಳೆ.

ವೈಜ್ಞಾನಿಕ ವಿವರ: ನಾಣ್ಯವನ್ನು ಬಲವಾಗಿ ಹಣೆಗೆ ಒತ್ತಿದಾಗ ಉಂಟಾಗುವ ಒತ್ತಡದಿಂದ ನಾಣ್ಯವು ಹಣೆಯ ಮೇಲೆಯೇ ಇದೆ ಎಂಬ ಭ್ರಮೆ ಉಂಟಾಗುತ್ತದೆ.

8. ಸಿಹಿ ಸಿಹಿ ಜಾಮೂನು

ಸುಮಾರು 4 ರಿಂದ 6 ವರ್ಷದ ಮಕ್ಕಳನ್ನು ಕರೆಯಿರಿ. ಇವರಿಗೆ ಯಾವುದಾದರೂ ಪತ್ರಿಕೆಯಿಂದ ಕತ್ತರಿಸಲಾದ ಸಿಹಿ ತಿಂಡಿಯ ಚಿತ್ರ(ಸಾಮಾನ್ಯವಾಗಿ ಜಾಮೂನು ಚಿತ್ರ)ವನ್ನು ತೋರಿಸಿ. ನಿಮಗೆ ಸಿಹಿ ನೀಡುತ್ತೇನೆ ಎಂಬ ಆಸೆ ಹುಟ್ಟಿಸಿ ಅವರ ಬೆರಳನ್ನು ಆ ಚಿತ್ರದ ಮೇಲೆ ಇಡಲು ಹೇಳಿ. ನಂತರ ಅದನ್ನೇ ನೋಡುತ್ತಾ ಹತ್ತು ಬಾರಿ ಜಾಮೂನು, ಜಾಮೂನು ಎಂದು ಹೇಳಿಸಿ. ನಂತರ ಆ ಬೆರಳನ್ನು



ಬಾಯಿಗಿಟ್ಟು ನೋಡಲು ಹೇಳಿ. ಆಗ ಮಕ್ಕಳು ಸಿಹಿಯಾಗಿದೆಯೆಂದು ಒಪ್ಪುತ್ತಾರೆ. ಈ ಪ್ರಯೋಗದ ಮೂಲಕ ಮುಗ್ಧ ಮನಸ್ಸಿಗೆ ಮಾನಸಿಕ ಸಲಹೆ ಕೊಟ್ಟು, ದೈಹಿಕ ಅನುಭವಗಳನ್ನು ಉಂಟುಮಾಡಲು ಸಾಧ್ಯವಿದೆಯೆಂದು ತೋರಿಸಬಹುದು.

9. ಬ್ರಷ್ ಪವಾಡ

ಮನಸ್ಸಿಗೆ ಭ್ರಮೆ ಉಂಟು ಮಾಡುವ ಮೂಲಕ ಮಾಟ, ಮಂತ್ರ, ತಂತ್ರಗಳನ್ನು ಪ್ರಯೋಗಿಸಲಾಗುತ್ತದೆ. ಮಾಟ, ಮಂತ್ರಗಳಿಗೊಳಗಾಗಿದ್ದೇನೆಂಬ ಭಯದಿಂದಲೇ ದೈಹಿಕ ಪರಿಣಾಮಗಳುಂಟಾಗುತ್ತವೆ.

ಮಾಡುವ ವಿಧಾನ : ಸಭಿಕರ ಮಧ್ಯದಿಂದ ಒಬ್ಬರನ್ನು ವೇದಿಕೆಗೆ ಕರೆಯುವುದು. ಅವರ ಬೆನ್ನಿನ ಮೇಲೆ ಬಟ್ಟೆ ಉಜ್ಜುವ ಬ್ರಷ್ ನಿಂದ ಉಜ್ಜಲು ಪ್ರಾರಂಭಿಸಿ. ಎಷ್ಟು ಸಾರಿ ಉಜ್ಜಲಾಯಿತು ಎಂಬುವನ್ನು ಲೆಕ್ಕ ಹಾಕಿಕೊಳ್ಳಲು ತಿಳಿಸಿ. ಬ್ರಷ್ ಹಾಕಿಸಿಕೊಳ್ಳುವಾತ ಬ್ರಷ್



ಮಾಡುವಾತನಿಗೆ ಬೆನ್ನು ಮಾಡಿ ನಿಲ್ಲಬೇಕು. ನಂತರ ಬ್ರಷ್‌ನಿಂದ ಆತನ ಬೆನ್ನನ್ನು ಉಜ್ಜದೆ ನಿಮ್ಮ ಬಟ್ಟೆಗೆ ಉಜ್ಜುತ್ತಾ ಇನ್ನೊಂದು ಕೈಯಿಂದ ಅವರ ಬೆನ್ನ ಮೇಲೆ ಬರಿ ಕೈಯಿಂದ ಉಜ್ಜಿ. ಬ್ರಷ್‌ನಿಂದ ಉಂಟಾಗುವ ದ್ವನಿಯನ್ನು ಗಮನವಿಟ್ಟು ಕೇಳುವ ಆತ ಬ್ರಷ್‌ನಿಂದಲೇ ತನ್ನ ಬೆನ್ನನ್ನು ಉಜ್ಜಲಾಗುತ್ತಿದೆ ಎಂಬ ಭ್ರಮೆಗೆ ಒಳಗಾಗುತ್ತಾನೆ. ಕೈಯಿಂದ ಉಜ್ಜಿದಾಗ ಬ್ರಷ್ ನಿಂದಲೇ ಉಜ್ಜುತ್ತಿರುವಂತೆ ತಿಳಿದು ತಪ್ಪು ಲೆಕ್ಕ ಹಾಕುತ್ತಿರುತ್ತಾನೆ.

ವೈಜ್ಞಾನಿಕ ಹಿನ್ನೆಲೆ : ಮೊದಲೇ ಆ ವ್ಯಕ್ತಿ ಬ್ರಷ್ ಅನ್ನು ನೋಡಿರುತ್ತಾನೆ. ಬ್ರಷ್‌ನಿಂದ ಉಜ್ಜಿದರೆ ಆಗಬಹುದಾದ ಶಬ್ಧ ಮತ್ತು ಸ್ಪರ್ಶಾನುಭವ ಆತನ ಮಿದುಳಿನಲ್ಲಿ ದಾಖಲಾಗಿರುತ್ತದೆ. ನೀವು ಆತನ ಬೆನ್ನನ್ನು ಬೆರಳಿನಿಂದ ಉಜ್ಜದರೂ ಅದೇ ಸಮಯದಲ್ಲಿ ಉಂಟಾಗುವ ಬ್ರಷ್‌ನ ಶಬ್ಧ ಈ ರೀತಿಯ ತಪ್ಪು ನಿರ್ಣಯಕ್ಕೆ ದಾರಿ

ಮಾಡಿಕೊಡುತ್ತದೆ.

10. ಗೋಡಬಾಬಾನ ಪವಾಡ ಅಥವಾ ಮುಟ್ಟಿದ್ದೆಲ್ಲಾ ಸಿಹಿಯಾಗುವುದು

ಮರಾಠಿ, ಕೊಂಕಣಿ ಭಾಷೆಗಳಲ್ಲಿ ಗೋಡ ಎಂದರೆ ಸಿಹಿಯೆಂದರ್ಥ. ಗೋಡಬಾಬಾ ಎಂಬಾತನಿಗೆ ಈ ಮರಾಠಿ ಹೆಸರು ಬರಲು ಕಾರಣ ಆತನಲ್ಲಿದ್ದ ವಿಶೇಷ ಶಕ್ತಿ. ಈತ ಮುಟ್ಟಿದ್ದೆಲ್ಲಾ ಸಿಹಿಯಾಗುತ್ತಿತ್ತೆಂಬ ಕಾರಣದಿಂದ ಈತನಲ್ಲಿ ಪವಾಡಸದೃಶ ಶಕ್ತಿ ಇದೆಯೆಂದು ಭಾವಿಸಲಾಗಿತ್ತು. ಈತ ಮುಟ್ಟಿದ್ದೆಲ್ಲಾ ಸಿಹಿಯಾಗುತ್ತಿತ್ತು. ಇಂತಹ ಪವಾಡವನ್ನು ನೀವೂ ಮಾಡಬಹುದು.

ಮಾಡುವ ವಿಧಾನ : ಔಷಧಿ ಅಂಗಡಿಗಳಲ್ಲಿ ಸಿಗುವ ಸ್ವೀಟೆಕ್ಸ್ (Sweetex) ಮಾತ್ರೆಗಳನ್ನು ತೆಗೆದುಕೊಳ್ಳಿ. ಮಾತ್ರೆಗಳನ್ನು ನೀರಿನಲ್ಲಿ ಕರಗಿಸಿ ದ್ರಾವಣವನ್ನು ತಯಾರಿಸಿಟ್ಟುಕೊಳ್ಳಿ. ಕಾರ್ಯಕ್ರಮ



ನಡೆಯುವಾಗ ನನಗೆ ಒಂದು ದೈವೀಶಕ್ತಿ ಇದೆ. ಅದರ ಪ್ರಭಾವದಿಂದ ನಾನು ಮುಟ್ಟಿದ್ದೆಲ್ಲವನ್ನು ಸಿಹಿ ಮಾಡುತ್ತೇನೆ ಎಂದು ಹೇಳಿ. ಮೊದಲೇ ತಯಾರಿಸಿಟ್ಟುಕೊಂಡ ದ್ರಾವಣವನ್ನು ಮಂತ್ರದ ನೀರೆಂದು ಹೇಳಿ. ಅದರಿಂದ ನಿಮ್ಮ ಕೈ ತೊಳೆಯಿರಿ. ತೇವದ ಕೈಯಿಂದ ನೀವು ಯಾವ ವಸ್ತುಗಳನ್ನು ಮುಟ್ಟಿದರೂ ಆ ವಸ್ತುಗಳು ಸಿಹಿಯಾಗಿರುತ್ತವೆ.

ವೈಜ್ಞಾನಿಕ ಹಿನ್ನೆಲೆ : ಸ್ವೀಟೆಕ್ಸ್ ಮಾತ್ರೆಯು ಸಕ್ಕರೆಗಿಂತಲೂ ಹಲವು ನೂರು ಪಟ್ಟು ಸಿಹಿ ಇರುವುದರಿಂದ ನೀವು ಮುಟ್ಟಿದ್ದೆಲ್ಲಾ ಸಿಹಿಯಾಗುವುದು.

11. ದೇವರು ಹೇಳುವುದು ಅಥವಾ ಮನಸ್ಸು ಓದುವುದು:

ನನಗೆ ವಿಶೇಷವಾದ ದೈವ ಶಕ್ತಿ ಇದೆ. ಇದರಿಂದ ಒಬ್ಬರ ಮನಸ್ಸಿನಲ್ಲಿ ಏನಿದೆ ಎಂದು ಹೇಳಬಲ್ಲೆ. ಆದ್ದರಿಂದ ನಿಮ್ಮಲ್ಲಿ ಯಾರಾದರೂ ವೇದಿಕೆ ಮೇಲೆ ಬನ್ನಿ ಎಂದು ಕರೆಯಿರಿ. ಆಗ ಪ್ರೇಕ್ಷಕರ ಕಡೆಯಿಂದ ಒಬ್ಬ ವ್ಯಕ್ತಿ ಬರುತ್ತಾನೆ. ಮೊದಲು ಕೆಲವು ಲೆಕ್ಕಾಚಾರಗಳನ್ನು ಹಾಕುವ ರೀತಿ ನಟಿಸಿ ಬಂದಾತನ ಹೆಸರನ್ನು ಹೇಳಿ. ಆತ ಏನು ಕೆಲಸ ಮಾಡುತ್ತಿದ್ದಾನೆ, ತಂದೆಯ ಹೆಸರು ಏನು? ತಾಯಿಯ ಹೆಸರು ಏನು? ಎಷ್ಟು ಜನ ಅಣ್ಣ ತಮ್ಮಂದಿರು, ವಿದ್ಯಾಭ್ಯಾಸದ ಮಟ್ಟ ಹೀಗೆ ಎಲ್ಲವನ್ನೂ ಹೇಳುತ್ತಾ ಹೋಗಿ. ಸಭಿಕರಿಗೆ ಆಶ್ಚರ್ಯವಾಗುವುದರಲ್ಲಿ ಸಂಶಯವಿಲ್ಲ. ಮುಂದುವರೆದು ಈತ ಒಬ್ಬ ಸಿನಿಮಾ ನಟಿಯನ್ನು ಬಹಳವಾಗಿ ಇಷ್ಟಪಡುತ್ತಾನೆ. ಎಷ್ಟು ಇಷ್ಟ ಪಡುತ್ತಾನೆಂದರೆ ಯಾವಾಗಲೂ ಆಕೆಯ ಒಂದು ಭಾವಚಿತ್ರವನ್ನು ಜೇಬಿನಲ್ಲಿ ಇಟ್ಟುಕೊಂಡಿರುತ್ತಾನೆ ಎಂದು ಹೇಳುತ್ತಾ ಆತನ ಜೇಬನ್ನು ಶೋಧಿಸಿ. ಜೇಬಿನಲ್ಲಿ ನೀವು ಹೇಳಿದ ಸಿನಿಮಾ ನಟಿಯ ಚಿತ್ರಪಟ ಇರುತ್ತದೆ. ಇವೆಲ್ಲವನ್ನೂ ನೋಡಿದ ಪ್ರೇಕ್ಷಕರು ಸ್ತಂಭೀಭೂತರಾಗುತ್ತಾರೆ.




ಮಾಡುವ ವಿಧಾನ : ಕಾರ್ಯಕ್ರಮ ನೀಡುವ ಮುನ್ನ ಪ್ರೇಕ್ಷಕರಲ್ಲಿ ಯಾರನ್ನಾದರೂ ಒಬ್ಬರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಿ. ನಂತರ ಅವರ ಹೆಸರು,

ತಂದೆಯ ಹೆಸರು, ತಾಯಿಯ ಹೆಸರು, ವಿದ್ಯಾಭ್ಯಾಸದ ಮಟ್ಟ ಹೀಗೆ ಎಲ್ಲ ವಿಚಾರಗಳನ್ನು ಅವರಿಂದ ಸಂಗ್ರಹಿಸಿಕೊಳ್ಳಿ. ಹಾಗೂ ಒಂದು ಸಿನಿಮಾ ನಟಿಯ ಚಿತ್ರ ಪಟವನ್ನು ಆತನಿಗೆ ನೀವೇ ನೀಡಿ. ಕರೆದಾಗ ವೇದಿಕೆಗೆ ತಡ ಮಾಡದೇ ಬರಬೇಕೆಂದು ಹೇಳಿ ನಿಗದಿಪಡಿಸಿಕೊಂಡಿರಬೇಕು. ಹಾಗೂ ನೀವು ಈ ಪ್ರಯೋಗ ಮಾಡುವ ಮುನ್ನ ನೀವು ಗುರುತಿಸಿದ ವ್ಯಕ್ತಿ ಪ್ರೇಕ್ಷಕರ ನಡುವೆ ಇರುವುದನ್ನು ಖಾತ್ರಿ ಮಾಡಿಕೊಳ್ಳಿ.

ವೈಜ್ಞಾನಿಕ ಹಿನ್ನೆಲೆ : ದೇವಸ್ಥಾನಗಳಲ್ಲಿ ಭಕ್ತರು ಗುಂಪಾಗಿ ಸೇರಿದಾಗ ತಮ್ಮ ತಮ್ಮ ಕಷ್ಟ ಸುಖಗಳನ್ನು ಮಾತನಾಡಿಕೊಳ್ಳುತ್ತಿರುತ್ತಾರೆ. ಇವರು ಮಾತನಾಡುವ ವಿಷಯಗಳೆಲ್ಲವನ್ನೂ ದೇವರು ಹೇಳುವವನ ಕಡೆಯ ವ್ಯಕ್ತಿ ಸಂಗ್ರಹಿಸಿ ಆತನಿಗೆ ರವಾನಿಸಿರುತ್ತಾನೆ. ಹಾಗೂ ಕೆಲವು ಸೀಮಿತ ಪ್ರದೇಶಗಳಲ್ಲಿ ಒಂದೇ ರೀತಿಯ ಸಮಸ್ಯೆಗಳು ಕಂಡು ಬರುವುದರಿಂದ ದೇವರು ಹೇಳುವವರು ಇನ್ನೂ ಸುಲಭವಾಗಿ ಮನೋದೌರ್ಬಲ್ಯ ಇರುವವರನ್ನು ಮೋಸಗೊಳಿಸುತ್ತಾರೆ.

12. ಕಲಂದರ್ ಬಾಬಾನ ಪವಾಡ

ಪೂನಾದ ಬಳಿ ಶಿವಪುರಿ ಎಂಬಲ್ಲಿ ಕಮರ್ ಆಲಿ ದರವೇಶ್ ದರ್ಗಾ ಇದೆ. ಅಲ್ಲಿ ಒಂದು ಕಲ್ಲನ್ನು ಬರೀ ಬೆರಳಿಂದ ಎತ್ತುವ



ಪವಾಡ ನಡೆಯುತ್ತದೆ. ಈ ದರ್ಗಾದಲ್ಲಿ ಸುಮಾರು 90 ಕೆ.ಜಿ. ತೂಕದ ಕಲ್ಲಿಗೆ ಹನ್ನೊಂದು ಮಂದಿ ಬೆರಳು ಕೊಟ್ಟು ಕಮರ್ ಅಲಿ ದರವೇಶ್‌ನ ಹೆಸರು ಹೇಳಿ ಅದನ್ನು ಅನಾಯಾಸವಾಗಿ ಎತ್ತಿಬಿಡುತ್ತಾರೆ. ಈತನ ಶಕ್ತಿಯಿಂದಾಗಿ ಕಲ್ಲಿನ ತೂಕವು ಹಗುರವಾಗುತ್ತದೆಂಬ ನಂಬಿಕೆ.

ಮಾಡುವ ವಿಧಾನ : ಹೆಚ್ಚು ತೂಕದ ಒಬ್ಬ ವ್ಯಕ್ತಿಯನ್ನು ವೇದಿಕೆಗೆ ಕರೆಯಿರಿ. ಆತನನ್ನು ಒಂದು ಕುರ್ಚಿಯ ಮೇಲೆ ಕಾಲುಗಳನ್ನು ಕೆಳಗೆ ಬಿಟ್ಟು ನೇರವಾಗಿ ಕೂರಲು ಹೇಳಿ. ಆತನಿಗೆ ತನ್ನ ಎರಡೂ ಕೈಗಳನ್ನು ತೊಡೆಯ ಮೇಲೆ ಇಡಲು ಹೇಳಿ. ನಾಲ್ಕು ವ್ಯಕ್ತಿಗಳನ್ನು ವೇದಿಕೆಗೆ ಆಹ್ವಾನಿಸಿ. ಕುಳಿತ ವ್ಯಕ್ತಿಯ ಎಡ ಮತ್ತು ಬಲದಲ್ಲಿ ಇಬ್ಬಿಬ್ಬರನ್ನು ನಿಲ್ಲಿಸಿ. ಅವರು ತಮ್ಮ ಎರಡೂ ಕೈನ ತೋರು ಬೆರಳುಗಳನ್ನು ಒಟ್ಟುಗೂಡಿಸಿ ನೇರಮಾಡಲು ಹೇಳಿ. ನಂತರ ಇಬ್ಬರು ತಮ್ಮ ನೇರ ಮಾಡಿರುವ ತೋರು ಬೆರಳನ್ನು ಕುಳಿತ ವ್ಯಕ್ತಿಯ ಮೊಣಕಾಲು ಸಂದಿಯಲ್ಲಿ ಇಡಲು ಹೇಳಿ. ಉಳಿದಿಬ್ಬರು ಕಂಕುಳಲ್ಲಿ ಬೆರಳನ್ನು ಇಡಲಿ. ಬಳಿಕ ವ್ಯಕ್ತಿಯನ್ನು ಎತ್ತಲು ಹೇಳಿ. ಅವರು ಪ್ರಯತ್ನಿಸಿ ವಿಫಲರಾಗುತ್ತಾರೆ. ನಂತರ ಕುಳಿತ ವ್ಯಕ್ತಿಯ ಭಾರವನ್ನು ಕಡಿಮೆ ಮಾಡಲು ಮಂತ್ರವನ್ನು ಹೇಳಬೇಕೆಂದು ಹೇಳಿ. "One. Two. Three. up" ಎಂದಾಗ ಒಮ್ಮೆಲೇ ಎತ್ತಬೇಕೆಂದು ಸೂಚಿಸಿ. ಮುಂದಿನ ಬಾರಿ ಅವರು ಬೆರಳುಗಳನ್ನು ಯಥಾಸ್ಥಾನದಲ್ಲಿರಿಸಿದಾಗ, ಮಂತ್ರ ಹೇಳಿದಂತೆ ನಟಿಸಿ, "One, Two, Three, up" ಎಂದು ಕೂಗಿ. ವ್ಯಕ್ತಿಯು ಎಷ್ಟೇ ಭಾರವಿರಲಿ ಅವರನ್ನು ಸುಲಭವಾಗಿ ಎತ್ತುತ್ತಾರೆ.

ವೈಜ್ಞಾನಿಕ ಹಿನ್ನೆಲೆ : ಮೊದಲ ಪ್ರಯತ್ನದಲ್ಲಿ ನಾಲ್ಕೂ ಜನರ ಮನಸ್ಸು ಒಂದೇ ಸಾರಿ ಕೆಲಸ ಮಾಡಲಿಲ್ಲ. ನಂತರ ಸೂಚನೆ ಕೊಟ್ಟಾಗ ನಾಲ್ಕೂ ಜನರ ಮನಸ್ಸು ಒಮ್ಮೆಲೇ ಕೆಲಸ ಮಾಡಿದ್ದರಿಂದ ವ್ಯಕ್ತಿಯನ್ನು ಸುಲಭವಾಗಿ ಎತ್ತಲು ಸಾಧ್ಯವಾಯಿತು.

13. ಮ್ಯಾಜಿಕ್ ಗೊಂಬೆ

ಪೂರ್ವ ತಯಾರಿ : ಮುಚ್ಚಳ ಇರುವ ಒಂದು ಚಿಕ್ಕದಾದ ಪ್ಲಾಸ್ಟಿಕ್ ಡಬ್ಬಿಯನ್ನು ತೆಗೆದುಕೊಳ್ಳಿ. (ಫೋಟೊ ಫಿಲ್ಮ್‌ಗಳನ್ನು ಇಟ್ಟಿರುವ ಡಬ್ಬಿಯಾದರೆ ಉತ್ತಮ) ಮುಚ್ಚಳವನ್ನು ತೆಗೆದು ಡಬ್ಬಿಯ ಒಳಗಡೆ ಅಡ್ಡವಾಗಿ ಒಂದು ಚಿಕ್ಕದಾದ ಕಡ್ಡಿಯನ್ನು ಬಿಗಿಯಾಗಿ ಸೇರಿಸಿ ಮುಚ್ಚಳವನ್ನು ಹಾಕಿ. ಒಂದು ಗೊಂಬೆಯ ತಲೆಯನ್ನು ಡಬ್ಬಿಯ ಮೇಲೆ ಸೇರಿಸಿ. ಗೊಂಬೆಯ ತಲೆಯ ಮುಖಾಂತರ ನೇರವಾಗಿ ಮುಚ್ಚಳ ಮತ್ತು ಡಬ್ಬಿಗೆ ರಂಧ್ರಮಾಡಿ ಒಂದು ದಾರವನ್ನು ತೂರಿಸಿ. ಈಗ ನಿಮ್ಮ ಮಾತು ಕೇಳುವ ಮಂತ್ರದ ಗೊಂಬೆ ತಯಾರಾಯಿತು.



ಈಗ ಆಸ್ಪತ್ರೆಗೆ ಹೋಗೋಣ ಬಾ ಎಂದು ಗೊಂಬೆಗೆ ಹೇಳಿ. ಅದು ಕೆಳಗೆ ಬರುವುದಿಲ್ಲ. ಜಾತ್ರೆಗೆ ಹೋಗೋಣ ಬಾ ಎಂದು ಹೇಳಿ. ಆಗ ಕೆಳಗೆ ಬರುತ್ತದೆ. ಅಜ್ಜಿ ಮನೆಗೆ ಹೋಗೋಣ ಬಾ ಎಂದು ಹೇಳಿ. ಆಗ ಕೆಳಗೆ ಬರುತ್ತದೆ. ಹೀಗೆ ಬೇರೆ ಬೇರೆ ಪ್ರಶ್ನೆಗಳನ್ನು ಕೇಳಿ ಪ್ರೇಕ್ಷಕರನ್ನು ರಂಜಿಸಿ.

ಮಾಡುವ ವಿಧಾನ: ಗೊಂಬೆ ಚಲಿಸದೆ ಸ್ಥಿರವಾಗಿ ನಿಲ್ಲಬೇಕಾದರೆ ದಾರದ ಎರಡೂ ತುದಿಯನ್ನು ಜಗ್ಗಿ ಹಿಡಿಯಿರಿ. ಸ್ವಲ್ಪ ಹಿಡಿತ ಕಡಿಮೆ ಮಾಡಿದರೆ ಗೊಂಬೆ ಕೆಳಗೆ ಇಳಿಯುತ್ತದೆ. ಹೀಗೆ ದಾರದ ಮುಖಾಂತರ ಗೊಂಬೆಯನ್ನು ಎಲ್ಲಿ ಅಂದರೆ ಅಲ್ಲಿ ನಿಲ್ಲಿಸಬಹುದು ಹಾಗೂ ಕೆಳಗಡೆ ಇಳಿಸಬಹುದು.

ವೈಜ್ಞಾನಿಕ ಹಿನ್ನೆಲೆ: ಈ ಪ್ರಯೋಗ ಘರ್ಷಣೆಯ ತತ್ವವನ್ನು ಅವಲಂಬಿಸಿದೆ. ದಾರದ ಎರಡೂ ತುದಿಯನ್ನು ಜಗ್ಗಿ ಹಿಡಿದಾಗ ಡಬ್ಬಿಯ ಒಳಗೆ ಇರುವ ಕಡ್ಡಿ ಮತ್ತು ದಾರಗಳ ಮಧ್ಯೆ ಘರ್ಷಣೆ ಹೆಚ್ಚಾಗಿ ಗೊಂಬೆ ಸ್ಥಿರವಾಗಿ ನಿಲ್ಲುತ್ತದೆ. ಹಿಡಿತವನ್ನು ಸಡಿಲಗೊಳಿಸಿದಾಗ ಘರ್ಷಣೆ ಕಡಿಮೆಯಾಗಿ ಗೊಂಬೆ ಕೆಳಗಡೆ ಇಳಿಯುತ್ತದೆ.

14. ಬಣ್ಣ ಬದಲಾಯಿಸುವ ಅರಿಸಿನ

ಸ್ವಾಮಿಗೆ ಅಷ್ಟ ಬಿಷ್ಟ ಭಕ್ತನಿಗೆ ಕಾರ್ಯಸಿದ್ಧಿಯಾಗುವುದೇ ಎಂದು ಪರಿಶೀಲಿಸಲು ಅರಿಸಿನದ ಚಿಟಿಕೆಯನ್ನು ನೀಡಲಾಗುತ್ತದೆ. ಅದನ್ನು ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದು, ಧ್ಯಾನ ಮಾಡುವ ಸೂಚನೆ ಕೊಡಲಾಗುತ್ತದೆ. ಕೆಲವೇ ನಿಮಿಷಗಳಲ್ಲಿ ಅರಿಸಿನ ಕೆಂಪು ಬಣ್ಣ ತಳೆಯುವುದು! ಆತಂಕಕಾರಿ ಪರಿಸ್ಥಿತಿ. ಕಾರ್ಯ ಸಿದ್ಧಿ ಯಾಗುವುದಿಲ್ಲ ಎಂಬ ಎಚ್ಚರಿಕೆ. ವಿಘ್ನ ಪರಿಹಾರಕ್ಕಾಗಿ ಮತ್ತೆ ಪೂಜೆ ಪುರಸ್ಕಾರಗಳನ್ನು ನಡೆಸಲಾಗುತ್ತದೆ. ಮತ್ತೊಮ್ಮೆ ಭಕ್ತನ ಕೈಗೆ ಅರಿಸಿನ ನೀಡಲಾಗುವುದು. ಭಕ್ತಿಯಿಂದ ಇದನ್ನು ಹಿಡಿದುನಿಂತ ಭಕ್ತನಿಗೆ ಎದೆಯಲ್ಲಾ ಡಬ-ಡಬ. ಆದರೆ ಈ ಬಾರಿ ಅರಿಸಿನ ಬಣ್ಣ ಬದಲಾಯಿಸುವುದಿಲ್ಲ.

ಭಕ್ತ, ಹೋಗು ನಿನ್ನ ಕೆಲಸವಾಗುವುದೆಂಬ ಆಶ್ವಾಸನೆ ನೀಡಲಾಗುತ್ತದೆ.

ಮಾಡುವ ವಿಧಾನ: ಒಂದು ತಟ್ಟೆಯಲ್ಲಿ ಅರಿಸಿನವನ್ನು ಹಾಕಿಕೊಳ್ಳಿ. ಅದಕ್ಕೆ ಹೊಂದಿಕೊಂಡಂತೆಯೇ ಅರಿಸಿನ ಹಾಗೂ ವಾಶಿಂಗ್ ಸೋಡಾದ ಮಿಶ್ರಣವನ್ನು ಹಾಕಿಕೊಳ್ಳಿ. ಈ ಮಿಶ್ರಣವು ನೋಡಲು ಅರಿಸಿನವಂತೆಯೇ ಕಾಣುವುದರಿಂದ ಅರಿಸಿನ ಹಾಗೂ ಇದರ ನಡುವೆ ವ್ಯತ್ಯಾಸ ಕಾಣುವುದಿಲ್ಲ. ಪ್ರೇಕ್ಷಕರಲ್ಲಿ ಕೆಲವರ ಕೈಗೆ ಅರಿಸಿನವನ್ನೂ ಇನ್ನು ಕೆಲವರ ಕೈಗೆ ಈ ಮಿಶ್ರಣವನ್ನೂ ಹಾಕಿ ಅದನ್ನು ಮುಚ್ಚಿಕೊಳ್ಳಲು ಹೇಳಿ. ಎಲ್ಲರ ಕೈಗೂ ಮಂತ್ರದ ನೀರೆಂದು ಹೇಳಿ ಕೆಲವು ತೊಟ್ಟು ನೀರನ್ನು ಹಾಕಿ. ಈಗ ಎರಡೂ ಕೈಗಳನ್ನು ಒಂದಕ್ಕೊಂದು ಉಜ್ಜಲು ಹೇಳಿ. ಕೆಲವರ ಕೈ ಕೆಂಪಾಗಿರುತ್ತದೆ. ಇನ್ನು ಕೆಲವರ ಕೈ ಹಳದಿಯಾಗಿರುತ್ತದೆ. ಕೈ ಕೆಂಪಾದವರಿಗೆ ಆರೋಗ್ಯ ಸರಿಯಿಲ್ಲವೆಂದೂ ಕಾರ್ಯಕ್ರಮದ ಕೊನೆಯಲ್ಲಿ ಔಷಧಿ ಕೊಡುವುದಾಗಿ ತಿಳಿಸಿ.

ವೈಜ್ಞಾನಿಕ ಹಿನ್ನೆಲೆ : ಅರಿಸಿನ ಕ್ಷಾರದ ದ್ರಾವಣಗಳೊಂದಿಗೆ ಬೆರೆತಾಗ ರಾಸಾಯನಿಕ ಕ್ರಿಯೆ ನಡೆದು ಕೆಂಪು ಬಣ್ಣ ಉಂಟಾಗುತ್ತದೆ. ವಾಶಿಂಗ್ ಸೊಡಾವು ಒಂದು ಕ್ಷಾರವಾಗಿದೆ.

15. ಐದು ಪೈಸೆಯನ್ನು ಹತ್ತು ಪೈಸೆಯನ್ನಾಗಿ ಮಾಡಿ

ನಿಮ್ಮ ಜೇಬಿನಿಂದ ನಾಣ್ಯ ತೆಗೆದು ಪ್ರೇಕ್ಷಕರಿಗೆ ತೋರಿಸಿ ಇದು ಎಷ್ಟು ಪೈಸೆ ಎಂದು ಕೇಳಿ. ಜನ ಹತ್ತು ಪೈಸೆ ಎಂದು ಹೇಳುತ್ತಾರೆ. ಅದಕ್ಕೆ ಮಂತ್ರದಂಡ ತಾಗಿಸಿ ಹಾಗೂ ಮಂತ್ರ ಪಠಿಸಿ ನಂತರ ತೋರಿಸಿ ಜನ ಐದು ಪೈಸೆ ಎನ್ನುತ್ತಾರೆ ಇದನ್ನೇ ಎರಡು ಮೂರು ಬಾರಿ ಪುನರಾವರ್ತಿಸಿ.

ಮಾಡುವ ವಿಧಾನ : ಅಲ್ಯುಮಿನಿಯಂನಿಂದ ತಯಾರಿಸಿದ ಹತ್ತು ಪೈಸೆಯ ನಾಣ್ಯ ತೆಗೆದುಕೊಳ್ಳಿ. ನಾಣ್ಯದ ಎರಡು ಅಂಚುಗಳನ್ನು ನೆಲಕ್ಕೆ ಉಜ್ಜಿ ಅಥವಾ ಅರದ ಸಹಾಯದಿಂದ ಸಮತಟ್ಟಾಗಿಸಿಕೊಳ್ಳಿ. ಹತ್ತು ಪೈಸೆ ಎಂದು ತೋರಿಸುವಾಗ ನಿಮ್ಮ ತೋರುಬೆರಳು ಹಾಗೂ

ಹೆಬ್ಬೆರಳ ಸಹಾಯದಿಂದ ಸಪಾಟಾದ ಭಾಗ ಮುಚ್ಚಿ ಹಾಗೂ ಹತ್ತು ಎಂದು ಬರೆದು ಭಾಗ ತೋರಿಸಿ. ಇದು ಪೈಸೆ ಮಾಡುತ್ತೇನೆಂದು ಮಂತ್ರದಂಡ ತಾಕಿಸಿ ಮಂತ್ರ ಹೇಳುವಾಗ ಅದನ್ನು ಬದಲಾಯಿಸಿ ಉಬ್ಬುಬ್ಬಾದ ಭಾಗವನ್ನು ನಿಮ್ಮ ಹೆಬ್ಬರಳು ಹಾಗೂ ತೋರು ಬೆರಳಿನಿಂದ ಮುಚ್ಚಿ, ನಾಣ್ಯದ ಇನ್ನೊಂದು ಬದಿ ತೋರಿಸಿ.ಇದನ್ನೇ ಎರಡು-ಮೂರು ಬಾರಿ ಪುನರಾವರ್ತಿಸಿ. ಪ್ರದರ್ಶನಕ್ಕೆ ಮೊದಲು ಅನೇಕ ಬಾರಿ ಅಭ್ಯಾಸ ಮಾಡಿಕೊಳ್ಳಿ.

ವೈಜ್ಞಾನಿಕ ಹಿನ್ನೆಲೆ : ಇದೊಂದು ಕೈಚಳಕ(ಪಾಮಿಂಗ್)

16. ಚಾಕುವಿನಿಂದ ಪಾತ್ರೆ ಎತ್ತಿ

ಚೊಂಬೊಂದರಲ್ಲಿ ಅಕ್ಕಿಯನ್ನು ತುಂಬಿಸಿ. ಉದ್ದವಾದ



ಚಾಕುವೊಂದನ್ನು ತೆಗೆದುಕೊಳ್ಳಿ. ಚಾಕುವನ್ನು ಚೊಂಬಿನಲ್ಲಿರುವ ಅಕ್ಕಿಯಲ್ಲಿ ಚುಚ್ಚಿ ಪಾತ್ರೆಯನ್ನು ಮುಟ್ಟದೇ ಕೇವಲ ಚಾಕುವನ್ನು ಹಿಡಿದು ಎತ್ತುವಂತೆ ಪ್ರೇಕ್ಷಕರನ್ನು ಆಹ್ವಾನಿಸಿ ಕೆಲವರು ಪ್ರಯತ್ನಿಸಲಿ. ಯಾರಿಗೂ ಸಾಧ್ಯವಾಗುವುದಿಲ್ಲ. ನೀವು ಮಂತ್ರದಂಡದ ಸಹಾಯದಿಂದ ಮಾಡುವೆ ಎಂದು ಹೇಳಿ ಮಾಡಿ ತೋರಿಸಿ ಚಪ್ಪಾಳೆ ಗಿಟ್ಟಿಸಿ.

ಮಾಡುವ ವಿಧಾನ : ತಳಕ್ಕಿಂತ ಚಿಕ್ಕ ಬಾಯಿ ಇರುವ ಚೊಂಬಿನಲ್ಲಿ ಪೂರ್ಣವಾಗಿ ಅಕ್ಕಿ ತುಂಬಿಸಿ. ಮಂತ್ರ ಹೇಳುತ್ತಾ ಚಾಕುವಿನಿಂದ 50-60 ಸಲ ಅಕ್ಕಿಯನ್ನು ಬಲವಾಗಿ ಕುಟ್ಟಿ. ಕೊನೆಗೊಂದು ಬಾರಿ ಆಳವಾಗಿ ಚುಚ್ಚಿ ಬಿಡಿ. ಚಾಕುವನ್ನು ಅಲುಗಾಡಿಸದೇ ಅದನ್ನು ಹಿಡಿದು ಮೇಲೆತ್ತಿ. ಚಾಕುವಿನೊಂದಿಗೆ ಪಾತ್ರೆಯೂ ಮೇಲೆ ಬರುವುದು.

ವೈಜ್ಞಾನಿಕ ಹಿನ್ನೆಲೆ: ಅಕ್ಕಿಯನ್ನು ಚೊಂಬಿನಲ್ಲಿ ಹಾಕಿದಾಗ ಅವುಗಳ ನಡುವೆ ಸಾಕಷ್ಟು ಸ್ಥಳಾವಕಾಶ ಇರುವುದು. ಚಾಕುವಿನಿಂದ ಕುಟ್ಟಿದಾಗ ಸ್ಥಳಾವಕಾಶ ಕಡಿಮೆಯಾಗಿ ಅಕ್ಕಿಯ ಕಾಳು ಒತ್ತೊತ್ತಾಗಿ ಕೂರುವುವು. ಹಾಗಾಗಿ ಅವು ಚಾಕುವನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತವೆ.


17. ನೀರಿನಲ್ಲಿ ಚಾಕು

ತಂಬಿಗೆ (ಚೊಂಬು)ಯಲ್ಲಿ ಮಂತ್ರದ ನೀರನ್ನು ತುಂಬಿ ಅದನ್ನು ಎಲ್ಲರಿಗೂ ತೋರಿಸಿ. ಪ್ರೇಕ್ಷಕರು ಬೆರಳಿಟ್ಟು ನೀರನ್ನು ನೋಡಲಿ. ಈಗ ಈ ನೀರಿನಲ್ಲಿ ಚಾಕು ಚುಚ್ಚಿ ಎತ್ತುವುದಾಗಿ ಹೇಳಿ. ಪ್ರೇಕ್ಷಕರನ್ನು ಆಹ್ವಾನಿಸಿ ಯಾರಿಗೂ ಸಾಧ್ಯವಿಲ್ಲ ಎಂದು ಹೇಳುತ್ತಾ ನೀವು ಚಾಕುವನ್ನು ನೀರಿನಲ್ಲಿ ಚುಚ್ಚಿ ಮೇಲೆತ್ತಿ.

ಮಾಡುವ ವಿಧಾನ: ಚಿಕ್ಕ ಬಾಯುಳ್ಳ ಚೊಂಬೊಂದನ್ನು ತೆಗೆದುಕೊಳ್ಳಿ. ಮರದ ಹಸಿ ರೆಂಬೆಯೊಂದನ್ನು ಆಳತೆಗೆ ತಕ್ಕಂತೆ ಕತ್ತರಿಸಿ ಅದರ

ತಳಕ್ಕೆ ಬಿಗಿಯಾಗಿ ಕೂಡಿಸಿ. ಕುಂಕುಮ, ಹೂ ಬೆರಸಿದ ನೀರನ್ನು ಚೊಂಬಿನಲ್ಲಿ ತುಂಬಿ. ಈ ನೀರು ವರ್ಣಮಯವಾಗಿರುವುದರಿಂದ ಕೆಳಗಿನ ಕಟ್ಟಿಗೆ ಕಾಣಿಸದು. ಚಾಕುವನ್ನು ಈ ಕಟ್ಟಿಗೆಗೆ ಚುಚ್ಚಿ ಮೇಲೆತ್ತಿ. ಕಟ್ಟಿಗೆ ಹಸಿಯಾಗಿದ್ದ ಕಾರಣ ಸುಲಭವಾಗಿ ಚಾಕುವನ್ನು ಚುಚ್ಚಬಹುದು. ಪ್ರೇಕ್ಷಕರು ಬೆರಳು ಹಾಕಿ ಪರೀಕ್ಷಿಸಿದರೂ ಕಟ್ಟಿಗೆ ಕೆಳಗಿರುವುದರಿಂದ ಕೈಗೆ ತಾಕದು. ತಂಬಿಗೆಯ ಬಾಯಿ ಚಿಕ್ಕದಿದ್ದ ಕಾರಣ ಕಟ್ಟಿಗೆ ಸುಲಭವಾಗಿ ಹೊರಗೆ ಬರದು.

ವೈಜ್ಞಾನಿಕ ಹಿನ್ನೆಲೆ : ಇದೊಂದು ಕೈಚಳಕ.



ಭಾರತ ಜ್ಞಾನ ವಿಜ್ಞಾನ ಸಮಿತಿಯ ಉದ್ದೇಶಗಳು

೧. ಸಂಪೂರ್ಣಸಾಕ್ಷರತೆ, ಸಾಕ್ಷರೋತ್ತರ ಕಾರ್ಯಕ್ರಮ ಹಾಗೂ ಮುಂದುವರಿಕೆ ಶಿಕ್ಷಣಕ್ಕೆ ಜನ ಬೆಂಬಲ ಒದಗಿಸಿ ಯಶಸ್ವಿ ಮಾಡುವುದು. ಕೆಲವು ಆಯ್ದ ಪ್ರದೇಶಗಳಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ತೆಗೆದುಕೊಂಡು ನಡೆಸುವುದು.

೨. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಸಂತಸ ಕಲಿಕೆಯ ಚಿಣ್ಣರ ಮೇಳಗಳು ಹಾಗೂ ಇತರ ಪೂರಕ ಕಾರ್ಯಕ್ರಮಗಳನ್ನು ಸಂಘಟಿಸುವುದು, ಶಿಕ್ಷಕರ ತರಬೇತಿ ಹಮ್ಮಿಕೊಳ್ಳುವುದು.

೩. ಮಹಿಳಾ ಸಮಾನತೆಗೆ ಪೂರಕವಾದ ಸಮತಾ ವಿಜ್ಞಾನ ಮೇಳಗಳನ್ನು ಸಂಘಟಿಸುವುದು ಹಾಗೂ ಸ್ವಸಹಾಯ ಸಂಘಗಳನ್ನು ರಚಿಸಿ ನಡೆಸುವುದು.

೪. ಮೂಢನಂಬಿಕೆ ವಿರೋಧಿಸುವ ಹಾಗೂ ವೈಜ್ಞಾನಿಕ ಮನೋಭಾವನೆ ಬೆಳೆಸುವ ಕಾರ್ಯಕ್ರಮ/ಕಾರ್ಯಾಗಾರ ಹಾಗೂ ಜಾಥಾಗಳನ್ನು ಹಮ್ಮಿಕೊಳ್ಳುವುದು.

೫. ಕಡಿಮೆ ಬೆಲೆಯಲ್ಲಿ ಶಿಕ್ಷಣ, ವಿಜ್ಞಾನ ಹಾಗೂ ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಿ ಮಾರಾಟ ಮಾಡುವುದು. ಜನಸಾಮಾನ್ಯರಲ್ಲಿ ಓದುವ ಹವ್ಯಾಸ ಬೆಳೆಸುವುದು.

೬. ಜಿಲ್ಲಾ, ತಾಲೂಕು, ಹಾಗೂ ಸ್ಥಳೀಯ ಮಟ್ಟದಲ್ಲಿ ಸದಸ್ಯರನ್ನು ನೊಂದಾಯಿಸಿ ಜ್ಞಾನ ವಿಜ್ಞಾನ ಕೇಂದ್ರಗಳನ್ನು ಆರಂಭಿಸುವುದು.

೭. ಜನಪರ ವಿಜ್ಞಾನ ಹಾಗೂ ತಂತ್ರಜ್ಞಾನ ಯೋಜನೆಗಳಿಗಾಗಿ ಒತ್ತಾಯಿಸುವುದು.

೮. ರಜಾ ದಿನಗಳಲ್ಲಿ ಮಕ್ಕಳಿಗಾಗಿ ವಿಜ್ಞಾನ ಶಿಬಿರಗಳನ್ನು ಏರ್ಪಡಿಸುವುದು.

೯. ಗ್ರಾಮೀಣಾಭಿವೃದ್ಧಿಯ ಕೆಲಸಗಳನ್ನು ಕೈಗೆತ್ತಿಕೊಳ್ಳುವುದು.



ನಾನು ಭಾರತದ ಭವಿಷ್ಯವನ್ನು ನೋಡುವ

ನಕ್ಷತ್ರ, ಗ್ರಹಗಳನ್ನು ನೋಡುವುದಿ

ಮುದ್ದು ಮಕ್ಕಳ ಹೊಳೆಯುವ ಕಣ್ಣುಗಳನ್ನು ನೋಡುತ್ತೇ

ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ, ಉಲ್ಲಾಸವಿ

ನಮ್ಮದೇಶದ ಭವಿಷ್ಯ ಉಜ್ವಲವಾಗಿರುತ್ತ

ಆ ಕಣ್ಣುಗಳಲ್ಲಿ ಕಣ್ಣೀರು, ನಿರಾಸೆ ತುಂಬಿ

ಭಾರತಕ್ಕೆ ಭವಿಷ್ಯವಿರುವುದಿ

